**ದಿನಾಂಕಃ 05.12.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **ವಾದಿ ಪರ** ಶ್ರೀ ಹೆಚ್ ಎನ್ ಬಿ ಎನ್ **ವಕೀಲರಿಂದಃ**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ಸಲ್ಲಿಸಿರುವ ಸಾಕ್ಷ್ಯ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ವಿಚಾರಗಳನ್ನು ನಾನೇ ವಕೀಲರಿಗೆ ತಿಳಿಸಿ ಬರೆಸಿರುತ್ತೇನೆ. ವಾದಿಯು ಈ ದಾವೆಯನ್ನು ಏನು ಪರಿಹಾರ ಕೋರಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯ ಪ್ರತಿವಾದಿಯು ನನ್ನ ಅಣ್ಣ. ನಾನು ಮತ್ತು ನನ್ನ ಅಣ್ಣನಾದ ಪ್ರತಿವಾದಿಯು ನನ್ನ ತಂದೆಯ ಮನೆಯನ್ನು ಎರಡು ಭಾಗಗಳಾಗಿ ವಿಭಾಗಿಸಿಕೊಂಡು ಸದರಿ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ ಎಂದರೆ ಸರಿ. ನನ್ನ ತಂದೆಯ ಹೆಸರು ಚಿಕ್ಕವನು. ಸದರಿ ಮನೆಯಲ್ಲಿ ಪೂರ್ವದ ಭಾಗದ ಮನೆಯನ್ನು ನನಗೆ ಮತ್ತು ಪಶ್ಚಿಮಾರ್ಧ ಭಾಗದ ಮನೆಯನ್ನು ಪ್ರತಿವಾದಿಗೆ ನೀಡಿದ್ದಾರೆ ಎಂದರೆ ಸರಿ. ಸದರಿ ಮನೆಯ ದಕ್ಷಿಣಕ್ಕೆ ಈ ದಾವೆಯ ವಾದಿಯ ಮನೆ, ಭಾವಿ ಮತ್ತು ತೆಂಗಿನ ಮರಗಳು ಇವೆ ಎಂದರೆ ಸರಿ. ನಮ್ಮ ಮನೆಯ ಉತ್ತರಕ್ಕೆ ಮುಖ್ಯ ರಸ್ತೆ ಮತ್ತು ಸದರಿ ಮುಖ್ಯ ರಸ್ತೆಯ ಉತ್ತರಕ್ಕೆ ಮೋತೇಗೌಡರ ಮನೆ ಬರುತ್ತದೆ ಎಂದರೆ ಸರಿ. ಸದರಿ ಮುಖ್ಯ ರಸ್ತೆಯು ಬನ್ನೂರು- ಟಿ.ನರಸೀಪುರ ಮುಖ್ಯ ರಸ್ತೆಗೆ ಸೇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಕೊನೆಗೆ ಬಸ್ ನಿಲ್ದಾಣ ಬರುತ್ತದೆ ಎಂದರೆ ಸರಿ. ನಿಡಿ-18 ರ ಭಾವ ಚಿತ್ರದಲ್ಲಿ ಕಾಣುವ ರಸ್ತೆಯು ಪ್ರತಿವಾದಿಯ ಮನೆಯ ಉತ್ತರಕ್ಕೆ ಇರುವ ರಸ್ತೆ ಎಂದರೆ ಸರಿ.

ವಾದಿಯ ಮನೆಯ ಮುಂದೆ ಕುಳ್ಳೇಗೌಡರ ಮನೆ ಬರುತ್ತದೆ ಎಂದರೆ ಸರಿ. ವಾದಿ ಮತ್ತು ಕುಳ್ಳೇಗೌಡರವರ ಮನೆಯ ಮಧ್ಯದಲ್ಲಿ ಗಲ್ಲಿ ಬರುತ್ತದೆ ಎಂದರೆ ಸರಿ. ನಾನು ಮತ್ತು ನನ್ನ ಸಹೋದರ ಪ್ರತಿವಾದಿಯು ವಾಸ ಮಾಡುತ್ತಿರುವ ಮನೆಯ ಪಶ್ಚಿಮಕ್ಕೆ ಖಾಲಿ ಜಾಗ ಇತ್ತು ಎಂದರೆ ಸರಿ. ಸದರಿ ಖಾಲಿ ಜಾಗವು ವಾದಿಗಳ ಕುಟುಂಬಕ್ಕೆ ಸೇರಿದ ಜಾಗ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾಗವು ವಾದಿಯ ಚಿಕ್ಕಪ್ಪ ಮಂಚೇಗೌಡರವರ ಭಾಗಕ್ಕೆ ದಿನಾಂಕ 07.05.1955 ರ ವಿಭಾಗ ಪತ್ರದ ಮೂಲಕ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಲ್ಲಿ ಚಿಕ್ಕವನ ಮನೆಯ ಹೊತ್ತಿನಲ್ಲಿ ಓಡಾಡಲು 5 ಗಜ ಜಾಗ ಬಿಡಬೇಕು ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 5 ಗಜ ಜಾಗದಲ್ಲಿ ವಾದಿಯ ಕುಟುಂಬದವರು ಓಡಾಡುತ್ತಿದ್ದರು ಮತ್ತು ವ್ಯವಸಾಯ ಸಾಮಾಗ್ರಿಗಳನ್ನು ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಕುಟುಂಬದವರು ನಮ್ಮ ಮನೆಯ ಉತ್ತರಕ್ಕೆ ಇರುವ ರಸ್ತೆಗೆ ಹೋಗಲು ಸದರಿ 5 ಗಜ ಜಾಗವನ್ನು ರಸ್ತೆಯನ್ನಾಗಿ ಉಪಯೋಗಿಸುತ್ತಿದ್ದರು ಎಂದರೆ ಸರಿಯಲ್ಲ. ವಾದಿಯ ಕುಟುಂಬದವರು ನಮ್ಮ ಮನೆಯ ಉತ್ತರಕ್ಕೆ ಇರುವ ರಸ್ತೆಗೆ ಬರಲು ವಾದಿಯ ಕುಟುಂಬದವರಿಗೆ ಸದರಿ 5 ಗಜ ಜಾಗವನ್ನು ಹೊರತು ಪಡಿಸಿ ಬೇರೆ ಯಾವುದೇ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು, ನಮ್ಮ ಮನೆಯ ಪಕ್ಕದಲ್ಲಿ ನೀವು ಹೇಳಿದಂತೆ ಯಾವುದೇ 5 ಗಜದ ರಸ್ತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 5 ಗಜದ ಜಾಗದ ಉತ್ತರದಲ್ಲಿ ಸುಮಾರು 10 ವರ್ಷಗಳ ಹಿಂದೆ ಪ್ರತಿವಾದಿಯು ಬಚ್ಚಲು ಮನೆ ಮತ್ತು ಅಂಗಡಿ ಮಳಿಗೆಯನ್ನು ನಿರ್ಮಿಸಲು ಪ್ರಾರಂಭಿಸಿದ್ದರು ಎಂದರೆ ಸರಿಯಲ್ಲ. ಸಾಕ್ಷಿದಾರರು

ಮುಂದುವರೆದು, ಪ್ರತಿವಾದಿಯು ತನ್ನ ಜಾಗದಲ್ಲಿ ಬಚ್ಚಲು ಮನೆ ಮತ್ತು ಅಂಗಡಿ ಮಳಿಗೆಯನ್ನು ನಿರ್ಮಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸಂದರ್ಭದಲ್ಲಿ ನಮ್ಮ ಗ್ರಾಮದ ಮುಖಂಡರು ಪಂಚಾಯತಿ ಸೇರಿ ಮಾತುಕತೆ ಮಾಡಿದ್ದರೂ ಸಹ ಪ್ರತಿವಾದಿಯು ಅದನ್ನು ದಿಕ್ಕರಿಸಿ ಬಚ್ಚಲು ಮನೆ ಮತ್ತು ಅಂಗಡಿ ಮಳಿಗೆಯನ್ನು ನಿರ್ಮಿಸಿದ್ದಾರೆ ಎಂದರೆ ಸರಿಯಲ್ಲ. 2013 ರಲ್ಲಿ ಸದರಿ ಬಚ್ಚಲು ಮನೆ ಮತ್ತು ಅಂಗಡಿ ಮಳಿಗೆಯ ಹಿಂಭಾಗದಲ್ಲೂ ಸಹ ಪ್ರತಿವಾದಿಯು ಸಹ ಕಟ್ಟಡವನ್ನು ನಿರ್ಮಿಸಲು ಪ್ರಯತ್ನಿಸಿದಾಗ ವಾದಿಯು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ವಾದಿಯು ಪ್ರತಿವಾದಿಯ ವಿರುದ್ಧ ಪೋಲೀಸ್ ಠಾಣೆಯಲ್ಲಿ ದುರು ದಾಖಲಿಸಿದ್ದರೂ ಸಹ ಯಾವುದೇ ಪ್ರಯೋಜನವಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನ ಹಿರಿಯ ಸಹೋದರನಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ವಾದಿಯ ಜಾಗದಲ್ಲಿ ಕಟ್ಟಡವನ್ನು ನಿರ್ಮಿಸಿರುವುದರಿಂದ ವಾದಿಯು ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ